# ಕರ್ನಾಟಕ ಸರ್ಕಾರ

<u>ಅಧಿಕೃತ ಜ್ಞಾಪನ ಸಂಖ್ಯೆ. ಸಿಆಸುಇ ೩೬ ಸೇಅನೇ ೯೬, ದಿನಾಂಕ ೭.೨.೯೭.</u>

ವಿಷಯ : ಕರ್ನಾಟಕ ನಾಗರೀಕ ಸೇವಾ ( ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು ೧೯೯೬ರಡಿಯಲ್ಲಿ ಅಭ್ಯರ್ಥಿಗಳನ್ನು ನೇಮಕ ಮಾಡುವ ಬಗ್ಗೆ ಮಾರ್ಗಸೂಚನೆಗಳು: ವಿಭಾಗಾಧಿಕಾರಿಗಳಿಗೆ ಅಧಿಕಾರ ನೀಡುವುದು.

* * * * *

ಕರ್ನಾಟಕ ನಾಗರೀಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, ೧೯೯೬ ರ ನಿಯಮ ೫ರ ಉಪ ನಿಯಮ (6) ರಲ್ಲಿ, ಮೃತ ನೌಕರರು ಸೇವೆ ಸಲ್ಲಿಸುತ್ತಿದ್ದ ಇಲಾಖೆಯಲ್ಲಿಯೇ ಅವರ ಅವಲಂಬಿತರಿಗೆ ನೇಮಕಾತಿ ನೀಡಬೇಕೆಂದು ತಿಳಿಸಲಾಗಿದೆ. ಆದರೆ, ಅರ್ಹಅಭ್ಯರ್ಥಿಗಳ ಅರ್ಜಿಗಳನ್ನು ಪುರಸ್ಕರಿಸಲು ಹಲವು ಇಲಾಖೆಗಳಲ್ಲಿ ರಿಕ್ತಸ್ಥಾನಗಳು ಲಭ್ಯವಿಲ್ಲದೇ ಇರಬಹುದು. ಸಂಬಂಧಪಟ್ಟ ಇಲಾಖೆಯಲ್ಲಿ ರಿಕ್ತ ಸ್ಥಾನಗಳು ಲಭ್ಯವಿಲ್ಲದೆ ಇದ್ದಲ್ಲಿ, ಸರ್ಕಾರವು ಹೊರಡಿಸಬಹುದಾದ ಯಾವುದೇ ಸಾಮಾನ್ಯ ಆದೇಶಕ್ಕೆ ಒಳಪಟ್ಟು, ರಿಕ್ತ ಸ್ಥಾನಗಳು ಲಭ್ಯವಿರುವ ಬೇರಾವುದೇ ಇಲಾಖೆಯಲ್ಲಿ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಅದೇ ನಿಯಮದಲ್ಲಿ ಅವಕಾಶವಿದೆ. ಅದರಂತೆ, ಇಲಾಖೆಯ ಮುಖ್ಯಸ್ಥರು ಸಕ್ಷಮ ಪ್ರಾಧಿಕಾರಿಗೆ ಈ ಮುಂದಿನ ರೀತಿಯಲ್ಲಿ ಪ್ರಸ್ತಾಪವನ್ನು ಕಳುಹಿಸಬೇಕು.

೨. ದಿವಂಗತ ಸರ್ಕಾರಿ ನೌಕರನ ಮಾತೃ ಇಲಾಖೆಯಲ್ಲಿ ಅನುಕಂಪದ ಆಧಾರದ ನೇಮಕಾತಿಗೆ, ಬಾಕಿಯಿರುವ ಅರ್ಹ ಅಭ್ಯರ್ಥಿಗಳ ಅರ್ಜಿಗಳನ್ನು ಪರಿಗಣಿಸಲು ರಿಕ್ತ ಸ್ಥಾನಗಳು ಲಭ್ಯವಿಲ್ಲದಿದ್ದಲ್ಲ, ಅಂತಹ ಅರ್ಜಿಗಳನ್ನು ಅದರೊಂದಿಗಿರುವ ದಾಖಲೆಗಳು, ಪ್ರಮಾಣ ಪತ್ರಗಳು ಇತ್ಯಾದಿಗಳೊಂದಿಗೆ, ಅಭ್ಯರ್ಥಿಯು ವಾಸಿಸುತ್ತಿರುವ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಂಬಂಧಿಸಿದ ವಿಭಾಗಾಧಿಕಾರಿಯವರಿಗೆ ಇಲಾಖಾ ಮುಖ್ಯಸ್ಥರು ಕಳುಹಿಸಿಕೊಡುವುದು. ಎಲ್ಲಾ ಇಲಾಖೆಯ ಮುಖ್ಯಸ್ಥರು ತಮ್ಮ ಇಲಾಖೆಯಲ್ಲಿನ "ಸಿ" ಮತ್ತು "ಡಿ" ವರ್ಗದಲ್ಲಿರುವ ಖಾಲಿ ಹುದ್ದೆಗಳ ಪಟ್ಟಿಯೊಂದನ್ನು, ಇಂದಿನವರೆಗಿನ ತಿದ್ದುಪಡಿಗಳನ್ನೊಳಗೊಂಡ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರತಿ ಮತ್ತು ಅನುಕಂಪದ ಆಧಾರದ ನೇಮಕಾತಿಯಿಂದ ಹೊರತುಪಡಿಸಿರುವ ಹುದ್ದೆಗಳ ಪಟ್ಟಿಯೊಂದಿಗೆ, ಸಂಬಂಧಿಸಿದ ವಿಭಾಗಾಧಿಕಾರಿಗಳಿಗೆ ಕಳುಹಿಸಿಕೊಡಬೇಕು. ಅನುಕಂಪ ಆಧಾರದ ನೇಮಕಾತಿಯ ಅರ್ಹ ಅಭ್ಯಥಿಗಳ ಅರ್ಜಿಗಳನ್ನು ಇಲಾಖಾ ಮುಖ್ಯಸ್ಥರಿಂದ ಸ್ವೀಕರಿಸಿದ ನಂತರ, ವಿವಿಧ ಇಲಾಖೆಗಳಲ್ಲಿರುವ ಖಾಲಿ ಸ್ಥಾನಗಳ ಪಟ್ಟಿ ಮತ್ತು ಅನುಕಂಪ ಆಧಾರದ ನೇಮಕಾತಿಯಿಂದ ಹೊರತುಪಡಿಸಿರುವ ಹುದ್ದೆಗಳ ಪಟ್ಟಿಗಳನ್ನು ಗಮನದಲ್ಲಿರಿಸಿಕೊಂಡು, ಸಂಬಂಧಪಟ್ಟ ಹುದ್ದೆಗೆ ಅನ್ವಯಿಸುವ ವೃಂದ ಮತ್ತು ನೇಮಕಾತಿ ನಿಯಮಗಳ ಆಧಾರದ ಮೇಲೆ ಅರ್ಜಿದಾರರ ವಿದ್ಯಾರ್ಹತೆ ಮತ್ತು ತಮ್ಮ ವಿಭಾಗದ ವ್ಯಾಪ್ತಿಯಲ್ಲಿ ಲಭ್ಯವಿರುವ ರಿಕ್ತ ಸ್ಥಾನಗಳನ್ನು ಆಧರಿಸಿ ವಿಭಾಗಾಧಿಕಾರಿಗಳು ಇಲಾಖಾ ಮುಖ್ಯಸ್ಥರಿಗೆ ಅಭ್ಯರ್ಥಿಗಳನ್ನು ಹಂಚಿಕೆ ಮಾಡುವುದು.

೩. ವಿಭಾಗಾಧಿಕಾರಿಗಳು ಹಂಚಿಕೆ ಮಾಡಿರುವ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಗೊತ್ತುಪಡಿಸಿರುವ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಿದ ತರುವಾಯ ಇಲಾಖಾ ಮುಖ್ಯಸ್ಥರು ಅಗತ್ಯ ಕ್ರಮವನ್ನು ಕೈಗೊಳ್ಳತಕ್ಕದ್ದು, ಈ ಕ್ರಮ ಕೈಗೊಂಡ ನಂತರವೂ ಅರ್ಜಿಗಳು ಉಳಿದಲ್ಲಿ, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗಾ ವಿಭಾಗಗಳ ವಿಭಾಗಾಧಿಕಾರಿಗಳು ಅಂತಹ ಅರ್ಜಿಗಳನ್ನು ತಮ್ಮ ಶಿಫಾರಸ್ಸುಗಳು, ಅಭಿಪ್ರಾಯಗಳೊಂದಿಗೆ ಬೆಂಗಳೂರು ವಿಭಾಗಾಧಿಕಾರಿಯವರಿಗೆ ಕಳುಹಿಸಿಕೊಡಬೇಕು. ತಮ್ಮ ವಿಭಾಗದ ವ್ಯಾಪ್ತಿಯಲ್ಲಿ ಅನುಕಂಪದ ಆಧಾರದ ನೇಮಕಾತಿಯ ಎಲ್ಲಾ ಅರ್ಜಿಗಳನ್ನು ಪುರಸ್ಕರಿಸಿದ ನಂತರ ರಿಕ್ತ ಸ್ಥಾನಗಳು ಉಳಿದಲ್ಲಿ, ಅದರ ಪಟ್ಟಿಯನ್ನೂ ಬೆಂಗಳೂರು ವಿಭಾಗಾಧಿಕಾರಿಯವರಿಗೆ ಬೆಳಗಾಂ, ಮೈಸೂರು ಮತ್ತು ಗುಲ್ಬರ್ಗಾ ವಿಭಾಗಾಧಿಕಾರಿಯವರು ಕಳುಹಿಸುವುದು, ಯಾವುದೇ ನಿರ್ದಿಷ್ಟ ವಿಭಾಗದಲ್ಲಿ ಹಂಚಿಕೆ ಮಾಡಿರದ ಅಭ್ಯರ್ಥಿಗಳನ್ನು ಖಾಲಿ ಸ್ಥಾನಗಳ ಲಭ್ಯತೆ ಮತ್ತು ವೃಂದಕ್ಕೆ

ಅನ್ವಯಿಸುವ ನೇಮಕಾತಿ ನಿಯಮಗಳಲ್ಲಿ ತಿಳಿಸಿರುವ ಅರ್ಹತೆಗಳನ್ನು ಅಭ್ಯರ್ಥಿ ಹೊಂದಿರುವುದನ್ನು ಗಮನದಲ್ಲಿರಿಸಿಕೊಂಡು, ಯಾವುದೇ ಇತರ ವಿಭಾಗದಲ್ಲಿನ ರಿಕ್ತ ಸ್ಥಾನಕ್ಕೆ ಸದರಿ ಅಭ್ಯರ್ಥಿಗಳನ್ನು ಹಂಚಿಕೆ ಮಾಡಲು ಬೆಂಗಳೂರು ವಿಭಾಗಾಧಿಕಾರಿಯವರು ಅಂತಿಮ ಪ್ರಯತ್ನ ಮಾಡುವುದು.

೪. ವಿಭಾಗೀಯ ಕೇಂದ್ರ ಕಾರ್ಯಸ್ಥಾನಗಳಲ್ಲಿರುವ ಎಲ್ಲಾ ಇಲಾಖಾ ಮುಖ್ಯಸ್ಥರು ಅನುಕಂಪದ ಆಧಾರದ ನೇಮಕಾತಿ ಮಾಡಿಕೊಳ್ಳುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ ಬೇಕಿದ್ದರೆ, ತಮ್ಮ ಇಲಾಖಾ ಮುಖ್ಯಸ್ಥರು ಮತ್ತು ವಿಭಾಗಾಧಿಕಾರಿಗಳ ನಡುವೆ ಸಮನ್ವಯ ಹೊಂದಿರಬೇಕು.

ಸಹಿ
ಎಂ.ವೆಂಕಟರಾಮಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-೧,
ಸಿಆಸುಇ (ಸೇವಾ ನಿಯಮಗಳು).